ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 1629/2018

ಚಾಸಾ:1 ಪ್ರಾಸಾ:1

ದಿನಾಂಕ: 08.07.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರವಿ ಗಣಪತಿ ಶಿಂಧೆ |
| ತಂದೆಯ ಹೆಸರು | : | ಗಣಪತಿ ಶಿಂಧೆ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಸಿ ಪಿ ಸಿ |
| ವಾಸ ಸ್ಥಳ | : | ಬಾಗಲಕೋಟೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2016 ರಿಂದ 2019 ಫೆಬ್ರವರಿ 24ರವರೆಗೆ ಕುಂದಾಪುರದ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 11-03-2018 ರಂದು ಬೆಳಿಗ್ಗೆ 8 ಗಂಟೆಗೆ ನಾನು ಎಂ ಕೋಡಿ ಪಾಯಿಂಟ್ ಕರ್ತವ್ಯದಲ್ಲಿರುವಾಗ ರಾತ್ರಿ 8 ಗಂಟೆಗೆ ವಾಪಸ್ಸು ಠಾಣೆಗೆ ಬಂದು ವಿಶ್ರಾಂತಿ ಪಡೆಯುತ್ತಿದ್ದಾಗ ಬಾತ್ಮಿದಾರರಿಂದ ಕೋಡಿಯ ಸಾರ್ವಜನಿಕ ಆಸ್ಪತ್ರೆಯ ಎದುರುಗಡೆ ಮಟ್ಕಾ ಜುಗಾರಿ ಆಟ ಆಡುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ. ನಾನು ಆ ವಿಚಾರವನ್ನು ಚಾಸಾ-6ರವರಿಗೆ ತಿಳಿಸಿದ್ದು, ಮಾನ್ಯ ನ್ಯಾಯಾಲಯದ ಅನುಮತಿಯನ್ನು ಪಡೆಯುವ ವೇಳೆಗೆ ಮಫ್ತಿಯಲ್ಲಿ ಹೋಗಿ ಗಮನಿಸುವಂತೆ ಸೂಚಿಸಿರುತ್ತಾರೆ.

ಸದ್ರಿ ಸ್ಥಳಕ್ಕೆ ರಾತ್ರಿ 8-45ಕ್ಕೆ ತಲುಪಿ ಗೂಡಾಂಗಡಿಯ ಪಕ್ಕದಲ್ಲಿ ಮರೆಯಲ್ಲಿ ನಿಂತು ಗಮನಿಸುತ್ತಿದ್ದು, ಆಗ 3 ಜನರು ನಾವು ನಿಂತಲ್ಲಿ ಬಂದು ನನ್ನನ್ನು ಇಲ್ಲಿ ಏನು ಮಾಡುತ್ತಿದ್ದೀರಾ ಎಂದು ಪ್ರಶ್ನಿಸಿದಾಗ ನಾನು ಕರ್ತವ್ಯದಲ್ಲಿರುವ ಪೇದೆ ಎಂದು ತಿಳಿಸಿ ನನ್ನ ಗುರುತಿನ ಚೀಟಿಯನ್ನು ತೋರಿಸಿ

ಮಟ್ಕಾ ಚೀಟಿ ಬರೆಯುತ್ತಿದ್ದ ಮಾಹಿತಿ ಮೇರೆಗೆ ಬಂದಿರುತ್ತೇನೆ ಎಂದು ತಿಳಿಸಿದಾಗ ಅವರುಗಳು ಏರು ಧನಿಯಲ್ಲಿ "ನೀನು ಏನು ರೈಡ್ ಮಾಡುತ್ತೀಯಾ, ನೀನು ಪೊಲೀಸ್ ಆಗಿ ಏನೂ ಮಾಡಲಾಗುವುದಿಲ್ಲ" ಎಂದು ಹೇಳಿ ಮೈಗೆ ಕೈ ಹಾಕಿ ದೂಡಿ ನನ್ನ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ ಹಿಡಿಯಲು ಮುಂದಾದಾಗ ಅವರುಗಳು ಓಡಿ ಹೋಗಿರುತ್ತಾರೆ.

ನಂತರ ನಾನು ಠಾಣೆಗೆ ಬಂದು ರಾತ್ರಿ 9-20 ಗಂಟೆಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿ ಸದ್ರಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ರಿಂದ 3ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ದಿಃ 12-03-2018 ರಂದು ಬೆಳಿಗ್ಗೆ 9 ಗಂಟೆಗೆ ಪಂಚನಾಮೆಗೆ ಚಾಸಾ-4 ಮತ್ತು 5ರವರನ್ನು ಕರೆ ತಂದಿದ್ದು, ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು 9 ರಿಂದ 10 ಗಂಟೆಯವರೆಗೆ ತಯಾರಿಸಿ ಪೋಟೋ ತೆಗೆದಿರುತ್ತಾರೆ. ಸಾಕ್ಷಿ ಸದ್ರಿ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದ್ರಿ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ದಿಃ 14-10-2015 ರಂದು ನಾನು ಪೊಲೀಸ್ ಇಲಾಖೆಗೆ ಸೇರಿರುತ್ತೇನೆ. ಆ ಸಮಯದಲ್ಲಿ ಕುಂದಾಪುರ ಪೊಲೀಸ್ ಠಾಣೆಯಲ್ಲಿ ಅಂದಾಜು 36 ಜನ ಸಿಬ್ಬಂದಿಗಳು ಇದ್ದರು. ಪ್ರತಿನಿತ್ಯ ನಮ್ಮ ಕಾರ್ಯ ವೈಕರಿಯನ್ನು ಚಾಸಾ-6ರವರು ಹಂಚುತ್ತಿದ್ದರು. ಸದ್ರಿ ದಿನ ನಮ್ಮ ಕೆಲಸವನ್ನು ಬೆಳಿಗ್ಗೆ 8 ಗಂಟೆಗೆ ಹಂಚಿಕೆ ಮಾಡಿರುತ್ತಾರೆ. ಪ್ರತಿದಿನದ ಕೆಲಸವನ್ನು ಠಾಣಾ ದಿನಚರಿಯಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿ. ರಾತ್ರಿ 8-45ಕ್ಕೆ ಪ್ರಾರಂಭವಾಗಿ 8-50ಕ್ಕೆ ಘಟನೆ ಮುಕ್ತಾಯವಾಗಿರುತ್ತದೆ. ಘಟನೆಯ ಅವಧಿ 5 ನಿಮಿಷ ಎಂದರೆ ಸರಿ. ಪ್ರತಿದಿನ ಬೆಳಿಗ್ಗೆ 8 ರಿಂದ ರಾತ್ರಿ 8ರವರೆಗೂ ಕರ್ತವ್ಯವನ್ನು ಹಂಚಲಾಗುತ್ತದೆ.

ಈ ಘಟನೆಗೆ ಸಂಬಂಧಿಸಿದಂತೆ ನನಗೆ ಕರ್ತವ್ಯವನ್ನು ಹಂಚಿದ್ದಾರೆ ಎಂದು ಠಾಣಾ ದಿನಚರಿಯಲ್ಲಿ ನಮೂದು ಇಲ್ಲ ಎಂದರೆ ಸರಿ. ನಮ್ಮ ಠಾಣೆಯಿಂದ ಘಟನಾ ಸ್ಥಳ 6 ಕಿ.ಮೀ ದೂರವಿರುತ್ತದೆ. ಲಿಖಿತವಾಗಿ ಕೆಲಸಕ್ಕೆ ನೇಮಿಸಿದ ಬಗ್ಗೆ ದಾಖಲೆ ಇಲ್ಲ. ನನಗೆ ಅದಕ್ಕೂ ಮೊದಲೇ ಆರೋಪಿತರ ಹೆಸರು ಪರಿಚಯವಿತ್ತು. ನಾನು ಕರ್ತವ್ಯ ಮುಗಿಸಿದ ನಂತರ ರಾತ್ರಿ 8 ಗಂಟೆಗೆ ವಸತಿಗೃಹದಲ್ಲಿ ಇದ್ದೆ. ನಾನು ನನ್ನ ಸ್ವಂತ ವಾಹನದಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಆ ಕಾಲಕ್ಕೆ

ನಾನು ಟೀ ಶರ್ಟ್ ಹಾಗೂ ಫ್ಯಾಂಟನ್ನು ಧರಿಸಿರುತ್ತೇನೆ. ನನ್ನ ವೀಕ್ಷಣೆಯಲ್ಲಿ ಮಟ್ಕಾ ಪ್ರಕರಣ ದಾಖಲಾಗಿರುತ್ತದೆ. ಅದು ರಮೇಶ್ ಸೇರುಗಾರರ ವಿರುದ್ದವಾಗಿರುತ್ತದೆ. ಆ ಪ್ರಕರಣದಲ್ಲಿ ನಾನು ಪಿರ್ಯಾದಿಯಲ್ಲ.

ಮೂರು ಜನರು ನನ್ನನ್ನು ದೂಡಿರುತ್ತಾರೆ. ನಾನು ಆ ದಿನ ಧರಿಸಿದ್ದ ಉಡುಪನ್ನು ತನಿಖಾಧಿಕಾರಿ ಅಮಾನತ್ತುಪಡಿಸಿಕೊಂಡಿಲ್ಲ. ನನಗೆ ಇದರಿಂದ ಯಾವುದೇ ನೋವು ಆಗಿಲ್ಲ ಹಾಗೂ ತಪಾಸಣೆಗಾಗಿ ವೈದ್ಯರನ್ನು ಭೇಟಿ ಮಾಡಿಲ್ಲ. ನನ್ನ ಬಟ್ಟೆಯ ಮೇಲೆ ಯಾವುದೇ ಕುರುಹು ಮೂಡಿಲ್ಲ. ಬಟ್ಟೆ ಹರಿದು ಅಥವಾ ಯಾವುದೇ ಕಲೆಯಾಗಿರುವುದಿಲ್ಲ. ಠಾಣೆಗೆ ಸಂಪರ್ಕಿಸಲು ನನ್ನ ಬಳಿ ಮೊಬೈಲ್ ಫೋನ್ ಇತ್ತು. ನಾನು ಸ್ಥಳದಲ್ಲಿ ಹಾಜರು ಇದ್ದು ಠಾಣೆಗೆ ಸಂಪರ್ಕ ಮಾಡಿ ವಿಚಾರ ತಿಳಿಸಿರುತ್ತೇನೆ. ಆದರೆ ಆಗ ಯಾರೂ ಬಂದಿರುವುದಿಲ್ಲ. ಅನಂತರದಲ್ಲಿ ಆರೋಪಿಗಳು ನನಗೆ ಸಿಕ್ಕಿರುವುದಿಲ್ಲ.

ನಿಪಿ-1ನ್ನು ಠಾಣೆಯಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ. ಆ ದಿನ ಸ್ಥಳದಲ್ಲಿ ಯಾವುದೇ ಘಟನೆ ಸಂಭವಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪ್ರಕರಣವನ್ನು ಗಮನಿಸಲು ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-6ರವರು ನನಗೆ ಕರೆ ಮಾಡಿ ಸ್ಥಳಕ್ಕೆ ಹೋಗುವಂತೆ ಸೂಚಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಮಾಡುವ ಯಾವುದೇ ಕರ್ತವ್ಯ ಸದ್ರಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸುವ ಯಾವುದೇ ಸಂದರ್ಭ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ನಿಪಿ-1ರಲ್ಲಿ ಹೇಳಿದ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿ ಬರೆದಿದ್ದು ಅದು ಸ್ಥಳದ ಸ್ಥಿತಿಗತಿಗೆ ಅನುಗುಣವಾಗಿಲ್ಲ ಎಂದರೆ ಸರಿಯಲ್ಲ.

ನಿಪಿ-3ನ್ನು ಪ್ರಕರಣಕ್ಕೆ ಅನುಗುಣವಾಗಿ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಅದರಲ್ಲಿ ಕಾಣುವ ಸ್ಥಳದಲ್ಲಿ ಯಾವುದೇ ಘಟನೆ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಯಾವುದೋ ಜಾಗವನ್ನು ಸುಮ್ಮನೆ ತೋರಿಸುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಮಟ್ಕಾ ವಿಚಾರದಲ್ಲಿ ಪೊಲೀಸರು ಸಕ್ರೀಯರಾಗಿ ಕರ್ತವ್ಯ ನಿರ್ವಹಿಸುತ್ತಾರೆ ಎಂದು ತೋರಿಸಿ ಅಂಕಿ ಅಂಶಗಳಿಗೊಸ್ಕರ ಈ ಪ್ರರಕಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಇದು ಸುಳ್ಳು ಪ್ರಕರಣವಾದ ಕಾರಣ ನಾನು ಧರಿಸಿದ್ದ ಬಟ್ಟೆಗಾಗಲೀ ಅಥವಾ ದೇಹಕ್ಕಾಗಲೀ ಯಾವುದೇ ತೊಂದರೆಯಾಗಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**